ವಿಶಾಖ ಎನ್.



# ರೆಹಮಾನ್ ಹೆಜ್ಜೆ

**ಎ.ಆರ್. ರೆಹಮಾನ್** ಅವರಿಗೆ ಬಲು ಸಂಕೋಚ. ಪತ್ರಕರ್ತ ಕರಣ್ ಥಾಪರ್ ತಾವು ಸಂದರ್ಶನ ಮಾಡಿದ ವ್ಯಕ್ತಿಗಳಲ್ಲೆಲ್ಲ ಮಹಾ ಬೋರಿಂಗ್ ಅಂದರೆ ರೆಹಮಾನ್ ಎಂದು ಹೇಳಿದ್ದರು. ಸ್ವರ ಸಂಯೋಜನೆಯಲ್ಲಿ ಎಣಿಕೆಗೆ ಸಿಗದಷ್ಟು ಪ್ರಯೋಗಗಳನ್ನು ಮಾಡುವ ರೆಹಮಾನ್, ಬೇರೆಯವರ ಸಂಗೀತ ಕೇಳಿ ಪ್ರತಿಕ್ರಿಯಿಸುವುದೂ ವಿರಳಾತಿವಿರಳ. ಅವರದ್ದು ನಿರ್ಭಾವುಕ ಮುಖ ಎಂದು ಟೀಕಿಸಿದವರೂ ಇದ್ದಾರೆ.

ತಾವಾಯಿತು ತಮ್ಮ ಸಂಗೀತ ಪ್ರಯೋಗವಾಯಿತು ಎನ್ನುವಂತೆ ನಿರುಮ್ಮಳವಾಗಿ ಇದ್ದ ಅವರು ಒಂದಷ್ಟು ಮಕ್ಕಳ ಜತೆ ಹೆಜ್ಜೆ ಹಾಕುವುದನ್ನು ಈಗ ನೋಡಬಹುದು. ‘ಮಾಮಣ್ಣನ್’ ತಮಿಳು ಸಿನಿಮಾದ ‘ಜಿಗು ಜಿಗು ರೈಲು’ ಎನ್ನುವ ಹಾಡಿನಲ್ಲಿ ರೆಹಮಾನ್ ಕೆಲವು ಮಕ್ಕಳ ಜತೆ ಹೆಜ್ಜೆ ಹಾಕಿದ್ದಾರೆ. ನೃತ್ಯ ಸಂಯೋಜಕರು ಹೇಳಿಕೊಟ್ಟಿದ್ದನ್ನು ಅವರು ಅಷ್ಟು ವ್ಯವಧಾನದಿಂದ ಪಾಲಿಸಿರುವ ಕುರಿತೂ ಕೆಲವರು ಮಾತನಾಡಿಕೊಳ್ಳುತ್ತಿದ್ದಾರೆ.

ಮಾರಿ ಸೆಲ್ವರಾಜ್ ನಿರ್ದೇಶನದ ‘ಮಾಮಣ್ಣನ್’ ಸಿನಿಮಾದಲ್ಲಿ ಉದಯನಿಧಿ ಸ್ಟಾಲಿನ್, ವಡಿವೇಲು ಹಾಗೂ ಫಹಾದ್ ಫಾಸಿಲ್ ಅಭಿನಯಿಸಿದ್ದಾರೆ. ‘ರಾಸ ಕಣ್ಣು’ ಎನ್ನುವ ಗೀತೆಯನ್ನು ಕೂಡ ವಡಿವೇಲು ಅವರು ಹಾಡಿದ್ದು, 65 ಲಕ್ಷಕ್ಕೂ ಹೆಚ್ಚು ಜನ ಯೂಟ್ಯೂಬ್‌ನಲ್ಲಿ ಅದನ್ನು ವೀಕ್ಷಿಸಿದ್ದಾರೆ. ಸಿನಿಮಾ ಹಾಡುಗಳ ಬಿಡುಗಡೆಯನ್ನು ಜೂನ್ 1ರಂದು ಚೆನ್ನೈನಲ್ಲಿ ದೊಡ್ಡ ಸಮಾರಂಭದಲ್ಲಿ ಮಾಡಲಾಯಿತು.

ದೃಶ್ಯ ರೂಪಕಗಳನ್ನು ಅಡಕಮಾಡಿ ಸಿನಿಮಾ ಮಾಡುವ ಮಾರಿ ಸೆಲ್ವರಾಜ್ ಅವರ ಈ ಸಿನಿಮಾ ಕುರಿತು ನಿರೀಕ್ಷೆಗಳು ಮಡುಗಟ್ಟಿವೆ.

# ಕತ್ರಿನಾ ಕಿಚಾಯಿಸಿದ ವಿಕ್ಕಿ

‘ಮುಂಗಾರು ಮಳೆ’ ಸಿನಿಮಾ ಬಂದಾಗ ಗೋಲ್ಡನ್ ಸ್ಟಾರ್ ಗಣೇಶ್ ಅವರನ್ನು ಕಂಡವರೆಲ್ಲ ಇನ್ನೊಬ್ಬ ತ್ಯಾಗದ ನಾಯಕ ಹುಟ್ಟಿದ ಎಂದೇ ಬಣ್ಣಿಸತೊಡಗಿದ್ದರು. ‘ಗಾಳಿಪಟ’ದಲ್ಲಿ ಕೊನೆಗೂ ಅವರಿಗೆ ನಾಯಕಿ ಸಿಕ್ಕಾಗ ಹಾಗೆ ಕಿಚಾಯಿಸಿದ್ದವರೆಲ್ಲರ ಮೊಗದಲ್ಲಿ ತುಂಟ ನಗೆ ಮೂಡಿತ್ತು. ಈಗ ಹಿಂದಿ ಚಿತ್ರರಂಗದಲ್ಲಿ ನಟ ವಿಕ್ಕಿ ಕೌಶಲ್ ಸ್ಥಿತಿಯೂ ಇದೇ ಆಗಿದೆ. ಅವರು ಅಭಿನಯಿಸಿರುವ ಒಂದು ಡಜನ್ ಚಿತ್ರಗಳ ಪೈಕಿ ಒಂಬತ್ತು ಸಿನಿಮಾಗಳಲ್ಲಿ ನಾಯಕಿ ಅವರಿಗೆ ಸಿಗುವುದೇ ಇಲ್ಲ.

‘ಝರ ಹಟ್ಕೆ ಝರ ಬಚ್ಕೆ’ ಸಿನಿಮಾದ ಬಿಡುಗಡೆಗೆ ಮುನ್ನ ಪ್ರಚಾರ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾಗ, ಸಿನಿಮಾಗಳಲ್ಲಿ ಅವರು ಮಾಡುವ ಪಾತ್ರಕ್ಕೆ ನಾಯಕಿ ಯಾಕೆ ಸಿಗುತ್ತಿಲ್ಲ ಎನ್ನುವ ಪ್ರಶ್ನೆ ಎದುರಾಯಿತು. ಅದಕ್ಕೆ ಅವರು ಕೊಟ್ಟ ಉತ್ತರ ಮಜವಾಗಿದೆ: ‘ದೇವರ ದಯೆ. ತೆರೆಮೇಲೆ ಅವನು ನನಗೆ ನಾಯಕಿಯನ್ನು ಕರುಣಿಸದೇ ಇದ್ದರೇನು, ನಿಜ ಬದುಕಿನಲ್ಲಿ ನೀಡಿದ್ದಾನೆ. ಕತ್ರಿನಾ ಕೈಫ್ ತರಹದ ಹುಡುಗಿ ನನ್ನ ಹೆಂಡತಿ. ಎಲ್ಲಾ ಅವನ ದಯೆ. ಅವನು ಹೇಗೆ ಆಶೀರ್ವಾದ ಮಾಡುವನೋ ಅದೇ ಬದುಕಿನಲ್ಲಿ ನಡೆಯುವುದಲ್ಲವೇ?’

ವಿಕ್ಕಿ ಕೌಶಲ್ ಹಾಗೂ ಕತ್ರಿನಾ ಕೈಫ್ ಇಬ್ಬರೂ ಮೊದಲು ಭೇಟಿಯಾದದ್ದು ಪ್ರಶಸ್ತಿ ಪ್ರದಾನ ಸಮಾರಂಭವೊಂದರಲ್ಲಿ. ಆಮೇಲೆ ಮತ್ತೊಂದು ಪ್ರಶಸ್ತಿ ಪ್ರದಾನ ಸಮಾರಂಭವನ್ನು ನಡೆಸಿಕೊಡುತ್ತಿದ್ದಾಗ, ವಿಕ್ಕಿ ವೇದಿಕೆ ಮೇಲೆ ನೇರವಾಗಿ ಕತ್ರಿನಾ ಅವರನ್ನು ಕಿಚಾಯಿಸಿದ್ದರು. ‘ಮದುವೆಯ ವಯಸ್ಸಾಯ್ತು. ಎಲ್ಲೆಲ್ಲೂ ಶುಭ ಸಮಾಚಾರ. ನೀವು ಕೂಡ ಯಾಕೆ ನಿಮಗೆ ಹೊಂದುವ ವಿಕ್ಕಿ ಕೌಶಲ್ ರೀತಿಯ ಹುಡುಗನನ್ನು ಮದುವೆಯಾಗಬಾರದು’ ಎಂದು ಪ್ರಶ್ನಿಸಿದ್ದರು. ಅದಾಗಲೇ ಅವರಿಬ್ಬರ ನಡುವೆ ಪ್ರಣಯ ಶುರುವಾಗಿತ್ತು. ಹೀಗಾಗಿ ಅದನ್ನೇ ಕಾರ್ಯಕ್ರಮದ ಸ್ಕ್ರಿಪ್ಟ್ ಬರೆದವರು ಸೇರಿಸಿದ್ದರು.

ಕತ್ರಿನಾ ಅವರನ್ನು ಮದುವೆಯಾದ ಮೇಲೆ ವಿಕ್ಕಿ ಕೈಗಳಲ್ಲಿ ಚಿತ್ರಗಳು ಹೆಚ್ಚಾಗಿಯೇ ಇವೆ. ‘ಝರ ಹಟ್ಕೆ ಝರ ಬಚ್ಕೆ’ ಹಾಸ್ಯಪ್ರಧಾನ ಸಿನಿಮಾ. ಅದಲ್ಲದೆ ‘ಸೆಕ್ಸ್’, ‘ಆಲ್‌ಮೋಸ್ಟ್ ಪ್ಯಾರ್ ವಿತ್ ಡಿಜೆ ಮೊಹಬ್ಬತ್’, ‘ದಿ ಇಮ್ಮಾರ್ಟಲ್ ಅಶ್ವತ್ಥಮ್ಮ’ ಸಿನಿಮಾಗಳಲ್ಲಿ ಅವರು ಅಭಿನಯಿಸಿದ್ದಾರೆ.

